International Journal of Kannada Research 2015; 1(3): 14-16



International Journal of Kannada Research
www.kannadajournal.com

ISSN: 2454–5813
IJSR 2015; 1(3): 14-16
© 2015 IJKS
www.kannadajournal.com
Received: 03-10-2015
Accepted: 04-11-2015

**Dr. P Nagabhushanagoud**
Lecturer, Department of History, Davanegeri University, Davanegeri-577002.

**Correspondence**
**Dr. P Nagabhushanagoud**
Lecturer, Department of History, Davanegeri University, Davanegeri-577002.

# ನಿಜಾಮನ ಆಡಳಿತ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು

**Dr. P Nagabhushanagoud**

**ಪ್ರಸ್ತಾವನೆ–** ೧೭೯೯ ರಲ್ಲಿ ಮೈಸೂರಿನ ಟಿಪ್ಪು ಸೋತಾಗಿನಿಂದ ಕ್ರಿ.ಶ.೧೯೪೮ ಸೆಪ್ಟೆಂಬರ್ ೧೭ರವರೆಗೆ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಕಲಬುರಗಿ, ಬೀದರ್, ರಾಯಚೂರು ಹಾಗು ಕೊಪ್ಪಳ ಜಿಲ್ಲೆಗಳು ಹೈದರಾಬಾದಿನ 'ಅಸಫಜಾಹಿ' ಮನೆತನದ ಅಧೀನಕ್ಕೊಳಪಟ್ಟಿದ್ದವು. ೧೭೨೪ರಲ್ಲಿ ಆರಂಭವಾಗಿದ್ದ ಈ ಮನೆತನದಲ್ಲಿ ಬ್ರಿಟಿಷ್ ದಾಖಲೆಗಳ ಪ್ರಕಾರ ಒಟ್ಟು ಏಳು ಜನ ನವಾಬರು ರಾಜ್ಯವಾಳಿದರು. ನಿಜಾಮರೆಂದೇ ಇವರು ಪ್ರಸಿದ್ಧಿ. ಬ್ರಿಟಿಷರಿಂದ 'ಹಿಸ್ ಎಕ್ಸಾಲ್ಟೆಡ್ ಹೈನೆಸ್' ಎಂಬ ಅಭಿದಾನಕ್ಕೆ ಪಾತ್ರರಾದ ಭಾರತದ ಏಕೈಕ ಅರಸರೆಂದರೆ ನಿಜಾಮರು ಮಾತ್ರ. ಈ ಸಂಸ್ಥಾನದ ಕೊನೆಯ ಅರಸ ಮೀರ್ ಉಸ್ಮಾನ್ ಅಲಿ ಖಾನ್ ಬಹಾದ್ದೂರ್. ಈತನ ಕಾಲದಲ್ಲಿ ಬ್ರಿಟಿಷ್ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರ ಸ್ವರೂಪ ಪಡೆಯುತ್ತಿದ್ದುದರಿಂದ ಹೈದರಾಬಾದಿನಲ್ಲೂ ಅದರ ಛಾಯೆ ಹೆಚ್ಚುವ ಭಯ ಈತನಲ್ಲಿತ್ತು. ಶಿಕ್ಷಣ ಪಡೆದವರೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮೂಲ ಪ್ರೇರಣೆ ಎಂಬುದು ಆತನ ನಂಬಿಕೆಯಾಗಿತ್ತು.

ಹೈದರಾಬಾದ್ ಸಂಸ್ಥಾನದ ಒಟ್ಟು ವಿಸ್ತೀರ್ಣ ೮೦೦೦೦ ಚದರ ಮೈಲಿಗಳಾಷ್ಟಾಗಿತ್ತು. ತೆಲುಗು ಭಾಷಿಕರಿದ್ದ ಎಂಟು ಜಿಲ್ಲೆಗಳು ತೆಲಂಗಾಣ ಪ್ರದೇಶಕ್ಕೆ ಸೇರಿದ್ದವು. ಆ ಜಿಲ್ಲೆಗಳೆಂದರೆ ಆದಿಲಾಬಾದ, ಕರೀಂನಗರ, ವಾರಂಗಲ್, ನಲ್ಗೊಂಡ, ಮೇದಕ್, ನಿಜಾಮಬಾದ್, ಮೆಹಬೂಬನಗರ, ಅತರಾಫಲ್ದಾ. ಮರಾಠಿ ಮಾತನಾಡುವ ಜನರಿದ್ದ ಮರಾಠವಾಡದಲ್ಲಿ ಐದು ಜಿಲ್ಲೆಗಳಿದ್ದವು. ಅವುಗಳೆಂದರೆ ಔರಂಗಾಬಾದ್, ಭೀಡ್, ಪರ್ಭಣಿ, ನಾಂದೇಡ್, ಹಾಗು ಉಸ್ಮಾನಬಾದ. ನಿಜಾಮ ಸಂಸ್ಥಾನಕ್ಕೆ ಸೇರಿದ ಕರ್ನಾಟಕದ ಆಗಿನ ಮೂರು ಜಿಲ್ಲೆಗಳೆಂದರೆ ಬೀದರ್, ಕಲಬುರಗಿ ಹಾಗು ರಾಯಚೂರು (ಈಗ ಕೊಪ್ಪಳ, ಯಾದಗಿರಿ, ಬಳ್ಳಾರಿ ಸೇರಿ ಆರು ಜಿಲ್ಲೆಗಳು). ೧೯೩೧ ರ ಜನಗಣತಿಯ ಪ್ರಕಾರ ಜನಸಂಖ್ಯೆ ೧,೪೪,೩೬,೧೪೮ ಇತ್ತು. ಇದರಲ್ಲಿ ೬೯,೭೨,೫೩೪ ತೆಲುಗು ಭಾಷಿಕರು, ೩೭,೮೬,೩೩೬ ಮರಾಠಿ ಭಾಷಿಕರಿದ್ದರೆ ಕನ್ನಡಿಗರ ಸಂಖ್ಯೆ ಕೇವಲ ೧೬,೨೦,೯೪. ಹೈದರಾಬಾದ್ ಕರ್ನಾಟಕದ ಕನ್ನಡಿಗರು ಕನ್ನಡದ ಇತರ ಪ್ರದೇಶಗಳಾದ ಮೈಸೂರು ಮತ್ತು ಬ್ರಿಟಿಷ್ ಪ್ರದೇಶಗಳೊಂದಿಗೆ ದೂರವಾಗಿ ಅನಾಥರಾಗಿದ್ದರು. ಹಿಂದೊಮ್ಮೆ ಮಹಾವೀರಾಚಾರ್ಯರಂತಹ ಗಣಿತ ಶಾಸ್ತ್ರಜ್ಞ, ವಿಜ್ಞಾನೇಶ್ವರರಂತಹ ನ್ಯಾಯ ಪಂಡಿತ, ಶ್ರೀವಿಜಯನಂತಹ ಕವಿ, ಬಸವೇಶ್ವರರಂತಹ ದಾರ್ಶನಿಕರನ್ನು ನೀಡಿದ್ದ ಈ ಭಾಗ ಹೆಚ್ಚು ಕಡಿಮೆ ಒಂದುವರೆ ಶತಮಾನಗಳ ಕಾಲ ತನ್ನತನವನ್ನು ಕಳೆದುಕೊಂಡು ಬದುಕಿತ್ತು.

ಸ್ವತಂತ್ರ ರಾಜ್ಯವಾಗಿದ್ದರೂ ಹೈದರಾಬಾದ್ ಸಂಸ್ಥಾನವು ಬ್ರಿಟಿಷರೊಡನೆ ಹಲವಾರು ಒಪ್ಪಂದಗಳನ್ನು ಮಾಡಿಕೊಂಡಿತ್ತು. ಅವರೊಡನೆ 'ಸಹಾಯಕ ಸೈನ್ಯ ಪದ್ಧತಿ' ಒಪ್ಪಂದಕ್ಕೆ ಸಹಿ ಹಾಕಿದ ನಂತರ ಬ್ರಿಟಿಷರಿಗೆ ಹೈದರಾಬಾದ್ ಸಂಸ್ಥಾನವು 'ತಡೆರಾಜ್ಯ' (ಬಫರ್ ಸ್ಟೇಟ್) ವಾಗಿ ಪರಿಣಮಿಸಿತ್ತು[೧]. ಬ್ರಿಟಿಷ್ ಸರಕಾರ ಏನೆಲ್ಲ ಕರಾರುಗಳನ್ನು ಹೇರಿದ್ದರೂ ಅದು ಶಿಕ್ಷಣಕ್ಕೆ ಒತ್ತು ಕೊಟ್ಟಿತ್ತು. ಭಾರತದಲ್ಲಿ ಬ್ರಿಟಿಷ್ ಸರಕಾರ ಸಾರ್ವಜನಿಕರಿಗಾಗಿ ಶಿಕ್ಷಣದ ವ್ಯವಸ್ಥೆ ಕೈಗೊಂಡಾಗ ನಿಜಾಮ ಸರಕಾರ ಕೂಡ ಶಿಕ್ಷಣ ವ್ಯವಸ್ಥೆಯೆಡೆ ಚಿಂತಿಸಲಾರಂಭಿಸಿತು. ೧೮೫೬ರಲ್ಲಿ ಸಾಲಾರಜಂಗ್ ರಾಜ್ಯದ ಶಿಕ್ಷಣ ಮಂತ್ರಿಯಾದ. ಆತ ಮಹತ್ವದ 'ದಾರುಲ್ ಉಲೂಮ್' (ಪೌರವಸ್ಥ ಶಿಕ್ಷಣ ಸಂಸ್ಥೆ) ಶಿಕ್ಷಣ ಯೋಜನೆಯೊಂದನ್ನು ಜಾರಿಗೆ ತಂದ. ೧೮೪೯ ರಲ್ಲಿ ನಿಜಾಂ ಸರಕಾರವು ಪ್ರತಿಯೊಂದು ತಾಲೂಕು ಹಾಗು ಜಿಲ್ಲಾ ಕೇಂದ್ರಗಳಲ್ಲಿ ಪರ್ಷಿಯನ್ ಹಾಗು ಆಯಾ ಭಾಗದ ಭಾಷೆಗಳ ಶಾಲೆಗಳನ್ನು ಆರಂಭಿಸಿದ. ಮೊದಲು ಪಾರ್ಸಿ ಆಡಳಿತ ಭಾಷೆಯಾಗಿತ್ತು. ಮುಂದೆ ನಿಜಾಮ ಉರ್ದುವನ್ನು ರಾಜಭಾಷೆ ಎಂದು ಘೋಷಿಸಿದ. ಈಗ ಆ ಸ್ಥಾನವನ್ನು ಉರ್ದು ಪಡೆಯಿತು.

ಆಡಳಿತಾತ್ಮಕವಾಗಿ ವಿಚಾರ ಮಾಡಿದಾಗ ಮೊದಲ ಸ್ಥಾನ ಉರ್ದುವಿಗು ಎರಡನೆಯ ಸ್ಥಾನ ಆಂಗ್ಲ ಭಾಷೆಗೂ ಅವಕಾಶ ಸಿಕ್ಕಿತು. ಕನ್ನಡಕ್ಕೆ ಹೆಚ್ಚು ಕಡಿಮೆ ಕೊನೆಯ ಸ್ಥಾನವಿತ್ತು. ಮರಾಠಿ ಮತ್ತು ತೆಲುಗು ಭಾಷಿಕರು ಕರ್ನಾಟಕದಲ್ಲೂ ಇದ್ದುದರಿಂದ ಅವರ ಸಮಸ್ಯೆಗಳು ಕನ್ನಡಿಗರಿಗಿಂತ ಕಡಿಮೆಯಿದ್ದವು ಎನ್ನಬಹುದು. ವ್ಯಾಪಾರಿಗಳು ತಮ್ಮ ಲೆಕ್ಕ ಪತ್ರಗಳಿಗಾಗಿ ಮರಾಠಿ ಮತ್ತು ಉರ್ದು ಭಾಷೆಯನ್ನೆ ಬಳಸುತ್ತಿದ್ದರು[೨].

**ನಿಜಾಂ ಸಂಸ್ಥಾನದಲ್ಲಿ ಶೈಕ್ಷಣಿಕ ಹಂತ ಈ ಕೆಳಗಿನಂತಿತ್ತು.**

| ಹಂತ | ಅವಧಿ | ಮಾಧ್ಯಮ |
|---|---|---|
| ತಹತಾನಿಯಾ<br>(ಪ್ರಾಥಮಿಕ)<br>ವಸ್ತಾನಿಯಾ<br>(ಮಾಧ್ಯಮಿಕ)<br>ಫೊಖಾನಿಯಾ<br>ಇಂಟರ್<br>ಮೀಡಿಯೆಟ್<br>ಪದವಿ ಹಂತ | ನಾಲ್ಕು<br>ವರ್ಷ<br>ಮೂರು<br>ವರ್ಷ<br>ಮೂರು<br>ವರ್ಷ<br>ಎರಡು<br>ವರ್ಷ<br>ಎರಡು<br>ವರ್ಷ | ಮಾತೃಭಾಷೆ ಉರ್ದು<br>ಸಾರ್ವತ್ರಿಕ ಉರ್ದು<br>ಸಾರ್ವತ್ರಿಕ– ಕೆಲವೆಡೆ ಆಂಗ್ಲ<br>ಎಲ್ಲೆಡೆ ಉರ್ದು. ನಿಜಾಂ<br>ಕಾಲೇಜಿನಲ್ಲಿ ಆಂಗ್ಲ<br>ಎಲ್ಲೆಡೆ ಉರ್ದು. ನಿಜಾಂ<br>ಕಾಲೇಜಿನಲ್ಲಿ ಆಂಗ್ಲ |

ಎಲ್ಲೆಡೆ ಉರ್ದುಮಯವಾಗಿ ಕನ್ನಡದ ಮಧ್ಯೆ ಉರ್ದು ಶಬ್ಧಗಳೇ ಹೈದರಾಬಾದ್ ಕರ್ನಾಟಕದಲ್ಲಿ ಮನೆಮಾತಾದವು. ಇಂಗ್ಲೀಷ್ ಅಭ್ಯಾಸದ ವಿಷಯಗಳು ಕೂಡಾ ಉರ್ದುವಿನಲ್ಲೆ ಬಳಕೆಯಾಗತೊಡಗಿದವು. ಹಿಂದೊಮ್ಮೆ ಸೈನ್ಯದ ಭಾಷೆಯಾಗಿದ್ದ ಉರ್ದು ಭಾಷೆ ಕಾಲಕ್ರಮೇಣ ಮುಸಲ್ಮಾನರ ಭಾಷೆಯಾಗಿ ಹೋಗಿತ್ತು. ಉರ್ದು ಹೇಗೆ ಪ್ರಭಾವ ಬೀರಿತ್ತು ಎಂಬುದನ್ನು ಈ ಪಟ್ಟಿಯನ್ನು ನೋಡಿದರೆ ಗೊತ್ತಾಗುತ್ತದೆ. ಈ ಕೆಳಗೆ ನೀಡಿರುವ ಪಟ್ಟಿಯು ಕೇವಲ ಒಂದು ಉದಾಹರಣೆ ಮಾತ್ರ. ಇಂತಹ ಸಾವಿರಾರು ಪದಗಳು ಜನಜೀವನದಲ್ಲಿ ಹಾಸು ಹೊಕ್ಕಾಗಿದ್ದವು. ವ್ಯಾಪಾರ ವಹಿವಾಟುಗಳಲ್ಲು ಅದೇ ಸ್ಥಿತಿ ಇತ್ತು. ಈಗಲೂ ಕಲಬುರಗಿ, ಬೀದರ್ ಮಾರುಕಟ್ಟೆಗಳಲ್ಲಿ ಅದೇ ಸ್ಥಿತಿ ಮುಂದುವರೆದಿರುವುದನ್ನು ಗಮನಿಸಬಹುದು.

| ಇಂಗ್ಲೀಷ್ ಪದ | ಬಳಸುತ್ತಿದ್ದ ಉರ್ದು ಪದ |
|---|---|
| ಕೆಮಿಷ್ಟ್ರಿ | ಕೀಮಿಯಾ |
| ಫಿಜಿಕ್ಸ್ | ತಬಯಾತ್ |
| ಬಾಟನಿ | ನಬಾತಿಯಾತ್ |
| ಜುಯಾಲಜಿ | ಹಯಾತಿಯಾತ್ |
| ಎಲಿಮೆಂಟರಿ ಮೆಥೆಮ್ಯಾಟಿಕ್ಸ | ಅದ್ನಾರಿಯಾಲಜಿ |
| ಆಫನಲ್ ಮೆಥೆಮ್ಯಾಟಿಕ್ಸ | ಅಲಾರಿಯಾಜಿ |
| ಲಿಟರೇಚರ್ | ಅದಬ್ |
| ನೀತಿಶಾಸ್ತ್ರ | ಅಖಲಾಖಿಯಾತ |
| ಸೋಶಿಯಾಲಜಿ | ಸಮಾಜಿಯಾತ್ |
| ಎಕನಾಮಿಕ್ಸ್ | ಮಾಷಿಯಾತ್ |

ಇದಿಷ್ಟು ಸರ್ಕಾರಿ ಶಾಲೆಗಳ ಮಾತಾದರೆ ನಿಜಾಮನಂತೂ ಖಾಸಗಿ ಶಾಲೆಗಳ ವಿರೋಧಿಯಾಗಿದ್ದ. ಏಕೆಂದರೆ ಖಾಸಗಿ ಶಾಲೆಗಳು ಸರಕಾರದ ವಿರುದ್ಧ ವಿದ್ಯಾರ್ಥಿಗಳನ್ನು ಪ್ರಚೋದಿಸುತ್ತವೆ ಎಂಬ ಭಯ ಆತನಲ್ಲಿ ಮನೆ ಮಾಡಿತ್ತು. ಖಾಸಗಿ ಶಾಲೆ ತೆರೆಯಲು ಹಲವಾರು ಕಟ್ಟುನಿಟ್ಟಿನ ನಿಬಂಧನೆ ಹೇರುತ್ತಿದ್ದರು. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಂಬಬಾರದು ಎಂದು ಸರಕಾರ ಬಹಿರಂಗವಾಗಿಯೇ ಹಲವಾರು ಕಾರಣಗಳನ್ನು ಮುಂದೆಮಾಡಿ ತೋರಿಸುತ್ತಿತ್ತು. ಈ ಬಗ್ಗೆ ಸರಕಾರವೇ ಸುತ್ತೋಲೆಯನ್ನು ಹೊರಡಿಸಿತ್ತು. ಜಿಲ್ಲಾಧಿಕಾರಿಗಳು, ಪೋಲಿಸ್ ಅಧಿಕಾರಿಗಳು ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದರು. ಅವರ ಕಿರುಕುಳ ಮಿತಿಮೀರಿತ್ತು. ೧೯೨೫ ರಲ್ಲಿದ್ದ ೩೧೪೨ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ೧೯೩೬ರ ವೇಳೆಗೆ ೮೬೮ ಕ್ಕೆ ಇಳಿಯಿತು. ವಿದ್ಯಾರ್ಥಿಗಳ ಸಂಖ್ಯೆ ೩೬,೬೫೪ ಇದ್ದದ್ದು ೨೫,೬೨೬ ಕ್ಕಿಳಿಯಿತು[೩].

**ನಿಜಾಮ ಕರ್ನಾಟಕದ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು**

ಹೈದರಾಬಾದ್ ಕರ್ನಾಟಕವೆಂದೇ ಕರೆಯಲಾಗುತ್ತಿರುವ ನಿಜಾಮ್ ಕರ್ನಾಟಕದಲ್ಲಿ ಪ್ರಾರಂಭವಾದ ಅತ್ಯಂತ ಹಳೆಯ ಖಾಸಗಿ ಶಿಕ್ಷಣ ಸಂಸ್ಥೆಯೆಂದರೆ ವಿಜಯ ವಿದ್ಯಾಲಯ ಶಿಕ್ಷಣ ಸಂಸ್ಥೆ. ಅರ್ನಸ್ ಬರ್ಗರ್ ಅವರು ೧೮೯೦ ರಲ್ಲಿ ವಸತಿ ನಿಲಯ ಸಮೇತವಾಗಿ ವಿಜಯ ವಿದ್ಯಾಲಯ ಸಂಸ್ಥೆಯನ್ನು ಕಲಬುರಗಿಯಲ್ಲಿ ಸ್ಥಾಪಿಸಿದರು. ೧೯೦೨ ರಿಂದ ಕನ್ನಡ ಶಿಕ್ಷಣ ಮಾಧ್ಯಮವಾಯಿತು. ೧೯೪೦ ರಲ್ಲಿ ಪ್ರೌಢಶಾಲೆಗಳನ್ನು ಸ್ಥಾಪಿಸಿದರು. ಹುಡುಗ ಹುಡುಗಿಯರಿಗೆ ಪ್ರತ್ಯೇಕ ಶಾಲೆಗಳಿದ್ದವು. ವಿದ್ಯಾರ್ಥಿನಿಯರಿಗಾಗಿ 'ಶಾಂತಿಸದನ'ವೆಂಬ ವಸತಿ ನಿಲಯದ ಏರ್ಪಾಡು ಮಾಡಲಾಗಿತ್ತು. (ಈಗಲೂ ಇದೆ). ಇದೇ ವೇಳೆ ರಾಯಚೂರಿನಲಿ ಕೂಡಾ ಕ್ರೈಸ್ತ ಪಾದ್ರಿಗಳು ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿದರು.

**ರಾಷ್ಟ್ರೀಯ ಶಾಲೆಗಳು**

ಹೈದರಾಬಾದ್ ಕರ್ನಾಟಕದಲ್ಲಿ ದೇಶಭಕ್ತಿಯನ್ನು ಪ್ರಧಾನವಾಗಿಟ್ಟುಕೊಂಡು ಸ್ಥಾಪಿಸಲ್ಪಟ್ಟು, ರಾಷ್ಟ್ರೀಯ ಶಾಲೆಯೆಂದೇ ಹೆಸರಾದ ಖಾಸಗಿ ಶಿಕ್ಷಣ ಸಂಸ್ಥೆಯೆಂದರೆ ಕಲಬುರಗಿಯಲ್ಲಿ ಸ್ಥಾಪಿತವಾದ ನೂತನ ವಿದ್ಯಾಲಯ. ೧೯೦೬ ರಲ್ಲಿ ವಿಠ್ಠಲರಾವ್ ದೇವಳಗಾಂಕರ್ ಅವರು ಒಬ್ಬ ಶಿಕ್ಷಕನಿಂದ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿದರು. ಪ್ರಾಥಮಿಕ ಹಂತದವರೆಗೆ ಕನ್ನಡ ಹಾಗು ಮರಾಠಿ ಶಾಲೆಗಳನ್ನು ನಡೆಸಿದರು. ಐದರಿಂದ ಮೆಟ್ರಿಕ್‌ವರೆಗೆ ಉರ್ದು ಇಲ್ಲವೆ ಇಂಗ್ಲೀಷ್ ಮಾಧ್ಯಮದಲ್ಲಿ ಓದಲು ಅವಕಾಶವಿತ್ತು. ೧೯೧೨ ರಲ್ಲಿ ಪ್ರೌಡಶಾಲೆಯನ್ನು ಸ್ಥಾಪಿಸಿದರು.

ಕಲಬುರಗಿ ಜಿಲ್ಲೆ ಚಿಂಚೋಳಿಯಲ್ಲಿ ಉಸ್ಮಾನಿಯಾ ಮಾಧ್ಯಮಿಕ ಶಾಲೆ (೧೯೧೧) ಹಾಗು ಇದೇ ವೇಳೆಯಲ್ಲಿ ರಾಯಚೂರಿನಲ್ಲಿ ತಾರಾನಾಥ ಗುರುಕುಲ ಸ್ಥಾಪನೆಯಾಯ್ತು. ತಾರಾನಾಥರ "ಹಮ್ ದರ್ದ್" ಎಂಬ ರಾಷ್ಟ್ರೀಯ ಶಾಲೆ (೧೯೨೦) ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆಯನ್ನು ಜಾಗೃತಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ದೇಸಾಯಿ ಮನೆತನದವರ ಪ್ರಯತ್ನದಿಂದ ವಿದ್ಯಾನಂದ ಗುರುಕುಲ ೧೯೨೨ ರಲ್ಲಿ ಸ್ಥಾಪನೆಗೊಂಡಿತು. ಮತ್ತು ಮೋರಗಿಯಲ್ಲಿ (೧೯೩೬) ಕನ್ನಡ ರಾಷ್ಟ್ರೀಯ ಶಾಲೆಗಳು ಪ್ರಾರಂಭವಾದವು[೪].

**ಪ್ರಥಮ ಕನ್ಯಾ ಶಾಲೆ**

೧೯೧೮ರಲ್ಲಿ ಕಲಬುರ್ಗಿಯ ಶರಣಬಸವೇಶ್ವರ ಮಹಾ ಸಂಸ್ಥಾನದ ಪೀಠಾಧಿಪತಿಗಳಾಗಿದ್ದ ದೊಡ್ಡಪ್ಪ ಅಪ್ಪಾ ಅವರು ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದರು. ಅವರು ಹಲವಾರು ಶಾಲೆಗಳನ್ನು ಆರಂಭಿಸಿ ರಾಷ್ಟ್ರೀಯತೆಯ ಮಹತ್ವ ಸಾರಿದರು. ಮಹಾತ್ಮ ಗಾಂಧಿಯವರು ೧೯೨೫ರಲ್ಲಿ ಶರಣಬಸವೇಶ್ವರ ಸಂಸ್ಥಾನಕ್ಕೆ ಭೇಟಿ ನೀಡಿದ್ದರು. ಆ ಕಾಲದಲ್ಲಿ ಶಿಕ್ಷಣ ಪಡೆಯುವುದೆ ದುಸ್ತರವಾಗಿತ್ತು. ಅಂತಹ ಸನ್ನಿವೇಶದಲ್ಲಿ ೧೯೩೪ ರಲ್ಲಿ ಮಹಾದೇವಿ ಕನ್ಯಾಶಾಲೆ ಎಂಬ ಶಾಲೆಯನ್ನು ಹೆಣ್ಣುಮಕ್ಕಳಿಗಾಗಿ ಸ್ಥಾಪಿಸಲಾಯಿತು.

**ಮೋರಗಿ ಶಾಲೆಯ ವಿಶೇಷತೆ**

ಭಾಲ್ಕಿ ಬೀದರ್ ಜಿಲ್ಲೆಯ ಪಟ್ಟಣ. ಖಾಸಗಿಯವರು ಕನ್ನಡ ಶಾಲೆಗಳನ್ನು ನಡೆಸಲು ಸರ್ಕಾರ ಹಲವಾರು ಅಡಚಣೆಯನ್ನುಂಟು ಮಾಡುತ್ತಿತ್ತು. ಹೀಗಾಗಿ ಭಾಲ್ಕಿಯ ಹಿರೇಮಠದ ಚನ್ನಬಸವ ಪಟ್ಟದ್ದೇವರು ೧೯೩೬ ರಲ್ಲಿ ಮೋರಗಿ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿದ್ದರು. ಆದರೆ ಹೊರಗೆ 'ಮದರಸಾ ತಹತಾನಿಯಾ' ಎಂದು ಉರ್ದು ಬೋರ್ಡ್ ಬರೆಯಿಸಿ ಒಳಗೆ ಕನ್ನಡ ಶಾಲೆ ನಡೆಸುತ್ತಿದ್ದರು. ಮಠದಲ್ಲಿ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯದ ವ್ಯವಸ್ಥೆ ಕೂಡಾ ಮಾಡಿದ್ದರು. ವಿಶೇಷವೆಂದರೆ ಆ ಊರಿನಲ್ಲಿ ಕೆಲಸ ಸಿಗದೆ ಉಪವಾಸದಿಂದ ಬಳಲುತ್ತಿದ್ದ ಇಬ್ಬರು ಅಂಥ ಮುಸಲ್ಮಾನರನ್ನು ಜೋಳ ಬೀಸಲು ನೇಮಿಸಿಕೊಡಿದ್ದರು(೫). ಈಗ ಮೋರಗಿ ಗ್ರಾಮ ಆಂಧ್ರ ಪ್ರದೇಶದ ನಾರಾಯಣಖೇಡ ತಾಲೂಕಿನಲ್ಲಿದೆ.

**ಯಾದಗಿರಿಯ ಸಂಸ್ಕೃತ ವಿದ್ಯಾಪೀಠ**

ಹೈದರಾಬಾದ್ ಕರ್ನಾಟಕದ ಮತ್ತೊಂದು ಪ್ರಮುಖ ಪಟ್ಟಣ ಯಾದಗಿರಿ (ಈಗ ಅದು ಜಿಲ್ಲಾ ಕೇಂದ್ರ). ೧೯೧೦ ರಲ್ಲಿ ಶಂಕರಣ್ಣ ಸಜ್ಜನ ಅವರು ಯಾದಗಿರಿಯಲ್ಲಿ ಸಂಸ್ಕೃತ ವಿದ್ಯಾಪೀಠವನ್ನು ಸ್ಥಾಪಿಸಿದರು. ಆ ಕಾಲದಲ್ಲೆ ಅವರು ಒಂದೂವರೆ ಲಕ್ಷ ರೂಪಾಯಿಗಳನ್ನು ದತ್ತಿರೂಪದಲ್ಲಿ ನೀಡಿದ್ದಲ್ಲದೆ ೪೦ ಎಕರೆ ಭೂಮಿಯನ್ನು ದಾನವಾಗಿ ನೀಡಿದರು. ಈ ಶಾಲೆಗೆ ಪ್ರಾಚಾರ್ಯರಾಗಿ ಕಾಶಿಯಲ್ಲಿ ಸಂಸ್ಕೃತ ವಿದ್ಯಾಬ್ಯಾಸ ಮಾಡಿ ಬಂದ 'ವ್ಯಾಕರಣತೀರ್ಥ' ಚಂದ್ರಶೇಖರ ಶಾಸ್ತ್ರಿಗಳು ಸೇವೆ ಸಲ್ಲಿಸಿದರು(೬). ಇಲ್ಲಿ ವಿದ್ಯಾಭ್ಯಾಸದ ಜೊತೆಗೆ ಊಟೋಪಚಾರದ ವ್ಯವಸ್ಥೆ ಕೂಡಾ ಇತ್ತು.

೧೯೩೦ ಫೆಬ್ರುವರಿಯಲ್ಲಿ ಆಡೂರಿನಲ್ಲಿ ಶ್ರೀ ವಿಶ್ವನಾಥ ವಾಚನಾಲಯ, ೧೯೪೧ರಲ್ಲಿ ಕೊಪ್ಪಳದಲ್ಲಿ ವಿದ್ಯಾರ್ಥಿ ಪ್ರಸಾದ ನಿಲಯ ಪ್ರಾರಂಭವಾದವು. ೧೯೩೨ ರ ವೇಳೆಗೆ ಕಲಬುರಗಿಯ ಚೌಡಾಪುರಿ ಹಿರೇಮಠದಲ್ಲಿ ಅಲ್ಲಿಯ ಶ್ರಿಗಳಾದ ಶ್ರಿ ಶಾಂತವೀರ ಶಿವಾಚಾರ್ಯರು ಉಚಿತ ಬೋರ್ಡಿಂಗ್ ಸ್ಥಾಪಿಸಿದರು. ಕರ್ನಾಟಕದ ಕವಿಗಳಲ್ಲೊಬ್ಬರಾದ ಡಾ.ಸಿದ್ದಯ್ಯ ಪುರಾಣಿಕರು ಈ ಬೋರ್ಡಿಂಗ್‌ನ ವಿದ್ಯಾರ್ಥಿಗಳಾಗಿದ್ದರು. ಹೀಗೆ ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳಗಳಲ್ಲಿ ಅಲ್ಲಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು, ವಾಚನಾಲಯಗಳು ಸ್ಥಾಪನೆಯಾಗಿ ದೇಶಭಕ್ತಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿದವು.

**ಖಾಸಗಿ ಶಾಲೆಗಳಲ್ಲಿ ಕಲಿಸಲಾಗುತ್ತಿದ್ದ ವಿಷಯಗಳು**

ಖಾಸಗಿ ಶಾಲೆಗಳೆಂದರೆ ಕೇವಲ ರಾಷ್ಟ್ರೀಯತೆಯನ್ನು ಬೆಳೆಸುವ ಶಾಲೆಗಳೆ ಆಗಿರಲಿಲ್ಲ. ಅನೇಕರು ಹೊಟ್ಟೆಪಾಡಿಗಾಗಿ ಶಿಕ್ಷಣ ವೃತ್ತಿ ಕೈಗೊಂಡಿದ್ದರು. ಗುಡಿಗುಂಡಾರಗಳಲ್ಲಿ ಮತ್ತು ಮಠಗಳಲ್ಲಿ ಉಪಜೀವನಕ್ಕೆ ಶಾಲೆಗಳು ನಡೆಯತ್ತಿದ್ದವು. ನುರಿತ ವಿದ್ಯಾವಂತರು ಹಳ್ಳಿಯಲ್ಲಿ ಮಕ್ಕಳಿಗೆ ವಿದ್ಯೆ ಕಲಿಸಿ ಸುಗ್ಗಿಯಲ್ಲಿ ಪೋಷಕರಿಂದ ಕಾಳುಕಡಿ ಪಡೆದುಕೊಳ್ಳುತ್ತಿದ್ದರು. ಶೀಮಂತರು ತಮ್ಮ ಮಕ್ಕಳ ಶಿಕ್ಷಣವನ್ನು ಮನೆಯಲ್ಲಿಯೇ ಖಾಸಗಿಯಾಗಿ ಕೊಡಿಸುತ್ತಿದ್ದರು. ವ್ಯಾಪಾರಿಗಳು ತಮ್ಮ ಲೆಕ್ಕ ಪತ್ರಗಳನ್ನು ಮಕ್ಕಳಿಗೆ ಕಲಿಸಿಕೊಡುತ್ತಿದ್ದರು. ಸಾಮಾನ್ಯವಾಗಿ ಸಂಸ್ಕೃತ, ವ್ಯಾಕರಣ, ಕನ್ನಡ ಕಾವ್ಯ, ಅಲಂಕಾರ, ಗಣಿತ ಶಿಕ್ಷಣದ ವಿಷಯಗಳಾಗಿರುತ್ತಿದ್ದವು. ರಾಜಶೇಖರ ವಿಳಾಸ, ಜೈಮಿನಿ ಭಾರತ, ರಾಮಾಯಣ, ಮಹಾಭಾರತ, ಕುಮಾರವ್ಯಾಸ ಭಾರತ ಮುಂತಾದವುಗಳನ್ನು ಓದಲು ಕಲಿಸುತ್ತಿದ್ದರು. ಅಲ್ಲದೆ ತಿಂಗಳು, ಋತುಗಳು, ಮಳೆ ನಕ್ಷತ್ರಗಳು, ಸೀತೆ ಸಾವಿತ್ರಿಯರ ಕಥೆಗಳು, ಪುರಾಣಗಳನ್ನು ಕಲಿಸಲಾಗುತ್ತಿತ್ತು(೭). ಹೀಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಹಲವಾರು ಅಡಚಣೆಗಳ ಮಧ್ಯೆಯೂ ಶಿಕ್ಷಣ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿವೆ. ಈಗಂತೂ ಹೈದರಾಬಾದ್ ಕರ್ನಾಟಕದಲ್ಲಿ ನೂರಾರು ಶಿಕ್ಷಣ ಸಂಸ್ಥೆಗಳಿವೆ. ಶಿಕ್ಷಣದ ಗುಣಮಟ್ಟ ಹೆಚ್ಚಿ ಪ್ರಜ್ಞಾವಂತ ನಾಗರಿಕರನ್ನು ಬೆಳೆಸುವ ಹೊಣೆಗಾರಿಕೆ ಇವುಗಳ ಮೇಲಿದೆ.

**ಕೊನೆ ಟಿಪ್ಪಣಿಗಳು**


1. ಜಾನ್ ಝುಬ್ರಝ್ಯುಕಿ., "ದ ಲಾಸ್ಟ್ ನಿಜಾಮ್", ಪಾನ್ ಮ್ಯಾಕ್‌ಮಿಲನ್ ಆಸ್ಟ್ರೇಲಿಯಾ ಪ್ರೈ ಲಿಮಿಟೆಡ್, ಸಿಡ್ನಿ, ೨೦೦೬, ಪುಟಗಳು ೬೩–೬೫, ನೋಡಿ– ಡಾ.ವಿ.ಆರ್.ಕೆ.ರೆಡ್ಡಿಯವರ ಲೇಖನ, ಎಡುಕೇಶನ್ ಅಂಡರ್ ಹೈದ್ರಾಬಾದ್ ಸ್ಟೇಟ್(೧೯೧೧–೧೯೫೬) ಸೌಥ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಪ್ರೊಸೀಡಿಂಗ್ಸ್–೧೯೮೭ ಸಂ.೭, ಪು.೧೯೩–೧೯೭
2. ಲಕ್ಷ್ಮೆ ಎಂ.ಎಸ್., "ಚೈತನ್ಯಶ್ರೀ", ಶ್ರೀ ಕೆ.ಶಾಂತಯ್ಯ ಅಭಿನಂದನ ಸಮಿತಿ, ರಾಯಚೂರು–ಕಲಬುರಗಿ, ೨೦೦೨, ಪು–೨೨೩
3. ಅದೇ ಪು. ೨೨೧
4. ವಿಮೋಚನೆ–ಕೊಪ್ಪಳ ಜಿಲ್ಲೆಯ ಹೈದರಾಬಾದ್ ವಿಮೋಚನಾ ಹೋರಾಟದ ಕಥೆ, ಜಿಲ್ಲಾ ಆಡಳಿತ ಕೊಪ್ಪಳ, ೧೯೯೯, ಪು–೧೩೧,
5. ಶಾಂತರಸ, "ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಶಾಲಾ ಕ್ರಾಂತಿ" ಪ್ರಜಾವಾಣಿ ದೀಪಾವಳಿ ವಿಶೇಷಾಂಕ ೨೦೦೦, ಪು–೩೪೨–೪೩
6. ನಾಗಭೂಷಣಗೌಡ.ಪಿ., "ಪ್ರಿನ್ಸ್ಲೀ ಸ್ಟೇಟ್ಸ್ ಆಫ್ ಮೈಸೂರ್ ಆ್ಯಂಡ್ ಹೈದರಾಬಾದ್" ಪೊಲಿಟಿಕಲ್ ಮೂವ್‌ಮೆಂಟ್ಸ್ ಫಾರ್ ಇಂಟಿಗ್ರೇಶನ್ ಇಂಟು ದಿ ಯೂನಿಯನ್ ಆ್ಯಂಡ್ ದಿ ಸ್ಟೇಟ್ (೧೯೩೫–೫೬), ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಗುಲಬರ್ಗಾ ವಿ.ವಿ, ಕಲಬುರಗಿ, ೨೦೦೦
7. ಲಕ್ಷ್ಮೆ ಎಂ.ಎಸ್., ಮೇಲಿನದೆ, ಪು–೨೨೩